d. No. M. 1299

॥ ಸತ್ಯಾನ್ನಾಸ್ತಿ ಧರ್ಮಃ ॥

ಸತ್ಯವಾದಿ

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 1—8—0

ಸಂಪುಟ ೭] ಮೈಸೂರು, ಮಂಗಳವಾರ, ೧೬ ನೆ ಜೂಲೈ ೧೯೨೫. [ಸಂಚಿಕೆ ೩೫

೧೦೦೦ ರೂಪಾಯಿಗಳ ಬಹುಮಾನ

ಲೋಕಪ್ರಸಿದ್ಧವಾದ

ಸಾಲಾಮಿಸ್ರಿಮುರಬ್ಬ

ನಮ್ಮ ಫ್ರೀಡ್ ಮಾರ್ಕನ್ನು ನೋಡಿ ಈ ಔಷಧವನ್ನು ತಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆ ಸ್ಖಲನವಾದರು ಮಾತ್ರದೊಂದಿಗೆ ಜೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು, ಅಜೀರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವುದು ಕಾಬೂಲ್ ಕಾಂದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವುವು. ಅನುವಾನ ಪತ್ರಿಕೆಯು ಡಬ್ಬಿ ಸಂಗಡಲೇ ಇರುತ್ತೆ. ಹೆಸರು ವಿಳಾಸ ಚೆನ್ನಾಗಿ ತಿಳಿಯುವಂತೆ ಇರಬೇಕು.

ಕ್ರಯ ಡಬ್ಬಿ 1 ಕ್ಕೆ ರೂ. 2—0—0

ಟಪ್ಪಾಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8 ಆಣೆ. ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ತಂತಿ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ.

ವಿಳಾಸ—ಡಿ ಮನ್ನಾಲಾಲ್, ಡೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೊ,
ಬೆಂಗಳೂರು ಸಿಟಿ.

ಸೀಮೆ ಭಂಗಾತದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷ್ಟ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗ್ರಾರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬುದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ, ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ನಂಜನಗೂಡಿನ ಮಿ|| ಬಿ.ವಿ, ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಪರಿಮಳತೈಲಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ,

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT LOAN BONDS & Shares of Prominent Companies

BOUGHT & SOLD

For particulars apply to:—

THE SEMAH ELISHA COMPANY

MYSORE.

ಮೈಸೂರು ಸರ್ಕಾರಿ ಸಾಲವ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

—

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತಸರ್ವಸ್ವ

——

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನ. ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳಿಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ —ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರ, ಬೆಂಗಳೂರು ಸಿಟಿ

——

ನಮ್ಮಲ್ಲಿ ಎಲ್ಲಾ ವಿಧವಾದ ಪೈಂಟಿಂಗ್ ಎಂಲಾರ್ಜಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಒಂದು ತಿಂಗಳವರಿಗೆ 15–12 ಸೈಜು ಎಂಲಾರ್ಜಮೆಂಟು ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದ 12 ರುಪಾಯಿಗೆ ಮಾಡಿಕೊಡುವೆವು. ಫೋಟೊ ಮತ್ತು ಅರ್ಧ ಹಣಾ ರವಾನಿಸಿ.

...ತ್ರಿಕೆಯನ್ನು ಪ್ರಕಟಿಸುವ ಕಾರ್ಯವು ...ಾಗಿ ಪ್ರಕಟನೆ ದಿನವನ್ನು ಶುಕ್ರವಾರದಿಂದ ...ಳವಾರಕ್ಕೆ ಬದಲಾಯಿಸಲಾಗಿದೆ.

"ಸತ್ಯವಾದಿ"

೧೬'ನೆ ಜೂನ್ ೧೯೨೫

ವಸ್ತ್ರಗಳ ವ್ಯಾಪಾರ.

ಹಿಂದೂದೇಶದಲ್ಲಿ ಪರದೇಶೀಯ ಬಟ್ಟೆಗಳ ವ್ಯಾಪಾರವು ಬಹಳಮಟ್ಟಿಗೆ ತಗ್ಗಿರುತ್ತದೆಂದು ಇಂಗ್ಲೀಷ್ ...ರು ಗೋಳಿಡುತ್ತಿರುವರು. ನಾಲ್ಕು ತಿಂಗಳ ...ಗೆ ಇತರ ದೇಶೀಯ ಬಟ್ಟೆಗಳ ಕಂಟ್ರಾಕ್ಟನ್ನು ...ದುಕೊಳ್ಳಕೂಡದೆಂದು ಕಲ್ಕತ್ತಾ ವರ್ತಕರು ನಿಶ್ಚ...ಸಿಕೊಂಡಿರುತ್ತಾರೆ. ಬೊಂಬಾಯಿನಲ್ಲಿ ಕೂಡ ಈ ...ವ್ಯಾಪಾರವು ಅಭಿವೃದ್ಧಿ ಸ್ಥಿತಿಯಲ್ಲಿರುವುದಿಲ್ಲ. ಗಡಂ...ಲ್ಲಿ ವಿದೇಶ ಬಟ್ಟೆಯ ಬೇಲ್‌ಗಳು ಮೂಲೆಗೀಡಾಗಿ ...ದ್ದಿರುತ್ತವೆ. ಮದರಾಸಿನಲ್ಲಿ ಕೂಡ ವಿದೇಶ ಬಟ್ಟೆ ...ಮಾರಾಟವು ಹೆಚ್ಚಾಗಿರುವುದಿಲ್ಲ.

ಹೀಗೆ ಪರದೇಶ ವಸ್ತ್ರಗಳು ಬಜಾರಿನಲ್ಲಿ ವ್ಯಾಪಾ...ರವಾಗುವುದಕ್ಕೆ ಬದಲಾಗಿ ಗಡಂಗುಗಳಲ್ಲಿ ಮಲಗಿ ...ರಿಸುತ್ತಲಿವೆ. ಇದರ ಕಾರಣವನ್ನು ಗೊತ್ತುಮಾ...ಡುವುದಕ್ಕಾಗಿ ವಿದೇಶೀಯರು ಬಹಳ ಮಟ್ಟಿಗೆ ಶ್ರಮ ...ಪಡುತ್ತಲಿರುವರು. ಇಂಗ್ಲೇಯರು ತಮ್ಮ ಬಟ್ಟೆಗಳ ಬೆಲೆಯು ಬಹಳ ಹೆಚ್ಚಾಗಿರುವುದೆಂತಲೂ ಜಪಾನಿನ ಬಟ್ಟೆಗಳ ಬೆಲೆಯು ಬಹಳ ಕಡಿಮೆಯಾಗಿರುವುದೆಂ...ತಲೂ ತಿಳಿದು ತಮ್ಮ ಬಟ್ಟೆಗಳ ಬೆಲೆಯನ್ನು ಬಹಳ ...ಮಟ್ಟಿಗೆ ಕಡಿಮೆಮಾಡುವುದೇ ಇದಕ್ಕೆ ಉಪಾಯ ...ವೆಂದು ಯೋಚಿಸುತ್ತಿದ್ದಾರೆ.

ಜಪಾನಿನವರಾದರೋ ಒಳ್ಳೆಯ ಬಟ್ಟೆಯನ್ನು ...ಯಾರ್ಕಾಡಿ ಹಿಂದೂ ಬಜಾರುಗಳಲ್ಲಿ ತಮ್ಮ ವ್ಯಾ...ಪಾರವು ಶಾಶ್ವತವಾಗಿ ನಿಲ್ಲುವಂತೆ ಮಾಡಿಕೊಳ್ಳ ...ಬೇಕೆಂದು ಪ್ರಯತ್ನಿಸುತ್ತಿದ್ದಾರೆ.

ಜರ್ಮನಿಯವರಾದರೋ ಈ ವ್ಯಾಪಾರದಲ್ಲಿ ...ಪುನಃ ಪ್ರವೇಶಿಸಬೇಕೆಂದು ಪ್ರಯತ್ನಪಡುತ್ತಿರುವರು.

ಇಂಗ್ಲೆಂಡಿಗೂ ಅಂಗ್ಲೇಯರ ಔನ್ನತ್ಯಕ್ಕೂ ಕಾರ...ಣಭೂತವಾದ ಈ ಬಟ್ಟೆಗಳ ವ್ಯಾಪಾರವು ಇಂತಹ ...ಸಂದಿಗ್ಧಸ್ಥಿತಿಯಲ್ಲಿರುವುದನ್ನು ಲಾಂಕಷೈರ್ ಮತ್ತು ...ಮ್ಯಾಂಚೆಸ್ಟರ್ ವರ್ತಕರು ಹೇಗೆ ಸಹಿಸುವರೋ ? ಈಗಾಗಲೇ ಎಷ್ಟೋ ನಷ್ಟ ಸಂಭವಿಸಿರುತ್ತದೆ. ಇದು ...ವರೆಗೆ ನಷ್ಟ ಸಂಭವಿಸೆವಾಗ್ಯೂ ಸರಕಾರಿಗರು ಇತರ ...ರೀತಿಗೆ ರಫ್ತಾಗುತಿದ್ದುವು. ಈಗ ಇದಕ್ಕೆ ಕಷ್ಟ ಸಂಭವಿ...ಸುತ್ತದೆ. ಎಲ್ಲಿದ್ದ ಸರಕು ಅಲ್ಲೇ ನಿಂತಿರುತ್ತವೆ ...ಹೊಸ ಸರಕುಗಳೇ ಇರುವುದಿಲ್ಲ. ಪ್ರತಿ ಮಿಲ್ಲಿ...ನ್ ರೇಟೂ ಬಹಳ ಮಟ್ಟಿಗೆ ತಗ್ಗಿರುತ್ತವೆ ಆದರೂ ಫಲಿತಾಂಶ ಕಂಡುಬರಲವಕಾಶವೇ ಇಲ್ಲ.

ಇದೇ ರೀತಿಯಲ್ಲಿ ಎಲ್ಲಾ ಕಾಲದಲ್ಲಿಯೂ ಇದ್ದಿ...ತೋ ಏನೊ ಎಂಬ ಮಹತ್ತಾದ ಯೋಚನೆಯಲ್ಲಿ ...ಮಗ್ನರಾಗಿರುತ್ತಾರೆ.

ಪ್ರಕೃತ ನಮ್ಮ ದೇಶದಲ್ಲಿ ಖದ್ದರಿನ ಉತ್ಪತ್ತಿಯು ...ಹೆಚ್ಚಾಗಿದೆಯೋ ಅಥವಾ ಕಮ್ಮಿಯಾಗಿರುವುದೋ ...ಏಗೆ ತಿಳಿದಿಲ್ಲ. ಖದ್ದರಿನ ಸರಕು ದಿನದಿನಕ್ಕೆ ಕಮ್ಮಿ ...ಆಗುತ್ತಿರುವಂತೆ ಕಾಣುತ್ತಿದೆ. ಕಾಂಗ್ರೆಸ್ ಪ್ರ...ಭಾವವು ಅಭಿವೃದ್ಧಿ ಸ್ಥಿತಿಯಲ್ಲಿರುವುದೆಂದು ಹೇಳಲು ...ಸಾಧ್ಯವಿರುವುದಿಲ್ಲ. ಪ್ರಚಾರಕರಿಗೆ ಕಾಂಗ್ರೆಸ್ ಸಿ...ದ್ಧಾಂತದಲ್ಲಿ ಸಂಪೂರ್ಣ ವಿಶ್ವಾಸವಿಲ್ಲದಂತಾಗಿರುವುದರಿಂದಲೂ ಪಾಮರರಾದವರಿಗೆ ಯಾವ ರೀತಿಯಲ್ಲುಪನ್ಯಾಸ ಮಾಡಬೇಕೆಂಬ ಸಂಗತಿಯು ತಿಳಿಯದೇ ಹೋಗುತ್ತಿರುವಂತೆ ಕಾಣುತ್ಪಲಿದೆ.

ಕಾಂಗ್ರೆಸ್ಸಿನ ಪ್ರಚಾರವು ಎಷ್ಟರಮಟ್ಟಿಗೆ ನೆರವೇರಿದ್ದಲ್ಲಿ ವಿಶೇಷ ಫಾಯಿದೆಗೆ ಅವಕಾಶವಿರುತ್ತಿತ್ತೋ ಅಷ್ಟು ಲಾಭವಿಲ್ಲದೇ ಹೋದಾಗ್ಯೂ ಪ್ರಕೃತ ಪ್ರತಿಯೊಬ್ಬರ ಮನಸ್ಸಿಗೂ ನಮ್ಮ ದೇಶದ ಬಟ್ಟೆಗಳನ್ನು ಕೊಳ್ಳುವುದೇ ನಮಗೆ ಒಳ್ಳೆಯದೆಂಬಂಶವು ಜೆನ್ನಾಗಿ ನುಂದಟ್ಟಿಗೆ ಬಂದಿರುತ್ತದೆ. ಖದ್ದರ್ ಬಟ್ಟೆಗಳು ಸ್ವಲ್ಪ ವರಟಾಗಿರುವಾಗ್ಯೂ ಅವುಗಳನ್ನು ಧರಿಸುವುದೇ ಗೌರವಾವಹವೆಂಬಂಶವು ಸರ್ವತ್ರ ವ್ಯಕ್ತವಾಗಿರುತ್ತದೆ ಈ ಭಾವನೆಯು ಸ್ವಲ್ಪ ಕಾಲದಲ್ಲಿಯೇ ನಮ್ಮ ದೇಶಕ್ಕೆ ಎಷ್ಟೋ ಪ್ರಯೋಜನವನ್ನುಂಟು ಮಾಡುವದರಲ್ಲಿ ಯಾವ ಸಂದೇಹವೂ ಇರುವುಲ್ಲ. ಬಟ್ಟೆಯ ಧಾರಣ ವ್ಯಾಸಿಗಳೂ, ಇಂಡಿಯಾ ದೇಶದ ವ್ಯಾಪಾರವನ್ನು ಹೊಡೆಯಬೇಕೆಂಬ ಪರದೇಶದ ಯಾವ ಜನಾಂಗದ ಆಶಯವು ಹೇಗೆಬೇಕಾದರೂ ಇರಲಿ. ಸ್ವದೇಶೋದ್ಧಾರದಲ್ಲಿ ಬದ್ಧಕಂಕಣರಾಗಿ, ನಮ್ಮ ಭಾರತೀಯ ಸಂತಾನರು ಖಾದಿ ಬಟ್ಟೆ ಧರಿಸಲುಪಕ್ರಮಿಸುವುದೇ ಮೇಲೆಂದು ತೋರುತ್ತದೆ.

ಆಹಾ ! ಧನಮೂಲಮಿದಂಜಗತ್ ಎಂಬ ಆರ್ಯೋಕ್ತಿಯು ಪ್ರಕೃತ ಪರಮ ಸೂಕ್ತಿಯಾಗಿರುತ್ತದೆ. ಗಂಡ ಹೆಂಡಿರನ್ನೂ ಬಂಧುಮಿತ್ರರನ್ನೂ ಮಕ್ಕಳನ್ನೂ ಅಗಲಿಸಿ ಹೊಡೆದಾಟಕ್ಕೆ ನಿಲ್ಲಿಸತಕ್ಕುದು ದ್ರವ್ಯವೇ ಅಲ್ಲವೆ ! ಒಂದು ದೇಶದವೇಲೆ ಮತ್ತೊಂದು ದೇಶವು ಬಿದ್ದು ಕೊಳ್ಳೆಹೊಡೆಯುವುದಕ್ಕೆ ಆರಂಭವಾಯಿತು. ಷಾನ್ಗ್ ಹೈ ಎಂಬ ಪ್ರದೇಶದಲ್ಲಿ ಮುನ್ನೂರು ಮಂದಿ ಜೈನಾದೇಶದ ವಿದ್ಯಾರ್ಥಿಗಳು ಬ್ರಿಟಿಷ್, ಅಮೆರಿಕಾ, ಜಪಾನ್ ಫ್ರೆಂಚ್ ಪ್ರಭುತ್ವದವರು ಜೈನಾದೇಶದಿಂದ ಅಪಾರ ಧನವನ್ನು ಕೊಳ್ಳೆಹೊಡೆಯುತಿರುವರೆಂತಲೂ ಆದುದರಿಂದ ಆ ವಿದೇಶಗಳನ್ನು ನಿರ್ಮೂಲಮಾಡಿಬಿಡಬೇಕೆಂದೂ ಉದ್ಘೋಷಿಸತಕ್ಕ ಪತ್ರಿಕೆಗಳನ್ನು ಬೀದಿ ಬೀದಿಗಳಲ್ಲಿ ಹರಡಿದರ. ಇದರಿಂದ ಜನರಲ್ಲಿ ಆಕ್ರೋಶಹುಟ್ಟಿ ಗುಂಪುಗುಂಪಾಗಿ ಪೋಲೀಸು ಸ್ಟೇಷನ್ನಿಗೆ ನುಗ್ಗಿ ಅದನ್ನು ಹಾಳುಮಾಡಿ ಇಬ್ಬರು ಬ್ರಿಟಿಷ್ ಪೋಲೀಸಿನವರನ್ನು ಕೆಳಕ್ಕೆ ಕೆಡವಿ ಬಹಳ ಅವಾಂತರ ನಡೆಸಿದರೆಂದೂ ಈ ಸಂದರ್ಭದಲ್ಲಿ ಆರು ಜನ ವಿದ್ಯಾರ್ಥಿಗಳು ಮೃತರಾದರೆಂದೂ ನಾಲ್ವರಿಗೆ ಘಾಯವಾಗಿರುತ್ತದೆಂದೂ ತಂತಿ ವರ್ತಮಾನ ಒಂದಿರುತ್ತದೆ. ಈ ಪ್ರಕೃತ ಇಂತಪ್ಪ ಭಯಂಕರವಾದ ವರ್ತಮಾನಗಳು ದಿನದಿನಕ್ಕೆ ಪ್ರಬಲವಾಗುತ್ತಲಿವೆ.

ಪೂರ್ವದಲ್ಲಿ ಒಬ್ಬಾನೊಬ್ಬ ಜೋಯಿಸನು ಒಬ್ಬಾನೊಬ್ಬ ಧೊರೆಯ ಸಮೀಪಕ್ಕೆ ಬಂದು, ಇನ್ನು ಕೆಲವು ದಿನಗಳಲ್ಲಿ ದೊಡ್ಡ ಮಳೆಯು ಬರುವುದೆಂತಲೂ ಆ ನೀರನ್ನು ಕುಡಿದವರೆಲ್ಲರಿಗೂ ಹುಚ್ಚು ಹಿಡಿಯುತ್ತದೆಂತಲೂ ಹೇಳಿದನಂತೆ. ಇದನ್ನು ಕೇಳಿ ಧೊರೆಯು ಆ ನೀರನ್ನು ತಾನು ಕುಡಿಯದಿರುವುದಕ್ಕೆ ಬೇಕಾದ ಏರ್ಪಾಡುಮಾಡಿಕೊಂಡಿದ್ದನು. ಜೋಯಿಸನು ಹೇಳಿದ ಕಾಲಕ್ಕೆ ಸರಿಯಾಗಿ ಮಳೆ ಬಿತ್ತು. ನೀರು ಕುಡಿದವರೆಲ್ಲರಿಗೂ ಹುಚ್ಚು ಹಿಡಿಯಿತು. ಧೊರೆಯು ಈ ನೀರನ್ನು ಕುಡಿಯದಿದ್ದುದರಿಂದ ಇವನಿಗೆ ಹುಚ್ಚು ಹಿಡಿಯದಿದ್ದಾಗ್ಯೂ ಯಾರ ಮಧ್ಯದಲ್ಲಿ ಇವನು ಕಾಲಕ್ಷೇಪಮಾಡಬೇಕಾಗಿದ್ದಿತೋ ಅಂತಹ ಪ್ರಜೆಗಳೆಲ್ಲರೂ ಹುಚ್ಚರಾಗಿದ್ದುದರಿಂದ ಧೊರೆಯೂ ಇವರನ್ನು ನೋಡಿನೋಡಿ ತಾನೂ ಹುಚ್ಚಾಗಿ ಹೇಗೋ ಕಾಲಕ್ಷೇಪಮಾಡಿಕೊಂಡಿದ್ದನೆಂಬ ಪೂರ್ವಕಥೆಯೊಂದುಂಟು. ಪ್ರಕೃತ ಭಾರತದೇಶ ರಾಜ್ಯಾಂಗ ವ್ಯವಹಾರಗಳು ಈ ರೀತಿಯಲ್ಲೇ ಇರುತ್ತವೆ. ಹೇಗೆಂದರೆ ಪ್ರಜೆಗಳು ಹುಚ್ಚೊಂದು ಪ್ರಭುತ್ವದ ಮಂತ್ರಿಗಳ ಹುಚ್ಚು ಮತ್ತೊಂದು. ನೂತನವಾಗಿ ವರ್ಷಿಸಿದ ಗಾಂಧಿಜಲಪಾನದಿಂದುಂಟಾದ ಹುಚ್ಚು ಮತ್ತೊಂದು ಈ ರೀತಿಯಲ್ಲಿ ಎಷ್ಟೆಷ್ಟೋ ಅವಾಂತರಗಳು ತಲೆದೋರಿ ತಲೆದೋರಿ ಎಷ್ಟೋ ವ್ಯತ್ಯಾಸಗಳುಂಟಾಗುವುದಕ್ಕೆ ಅವಕಾಶವಾಗಿವೆ.

ಗ್ರಾಮಗಳ ದುಸ್ಥಿತಿ ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಜನರಲ್ಲಿ ಪ್ರೇಮದ ಸಮಾಚಾರವೇ ಇಲ್ಲ. ಅಸೂಯೆಯು ಹೆಚ್ಚಾಯಿತು. ಕಕ್ಷಿಗಳೂ ಕಾರ್ಪಣ್ಯಗಳೂ ಹೇರಳವಾಗಿ ಒಬ್ಬರ ವಿನಾಶಕ್ಕೆ ಮತ್ತೊಬ್ಬರು ಕಾರಣವಾಗಿ ನಿಲ್ಲುತ್ತಿದ್ದಾರೆ. ಅಣ್ಣತಮ್ಮಂದಿರು ಕೋರ್ಟಿನ ಮೂಲಕವೇ ವಿಭಾಗಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಅರ್ಧ ಆಸ್ತಿಯಾದರೂ ಜೊಕ್ಕ ಏಜೆಂಟರಿಗಾದರೋ ಸ್ವಲ್ಪ ಕಾರಣಕ್ಕೆಲ್ಲಾ ಕೋರ್ಟು ಹತ್ತಿಸುವದೇ ಕೆಲಸ. ಈ ಸಂಬಂಧಕ್ಕೆ ಸಿಕ್ಕದವರು ಕೇವಲ ಅಪ್ರಯೋಜಕರೆಂದು ಗಣನೆ. ಅವರು ಊರಿನಿಲ್ಲುವದೇ ಕಷ್ಟ. ಅಪ್ರಯೋಜಕರಾದರೂ ಚಿಂತೆಯಿಲ್ಲ. ನೆಮ್ಮದಿಯಾಗಿರುವದಕ್ಕುಂಟೆ ? ಎರಡಾರು ದಿನ ಕೋರ್ಟಿನಲ್ಲಿ ನಿಂತು ಒದ್ದಾಡಲೇಬೇಕು. ಚೂಜು ಪಾನ ಇವು ಹೆಚ್ಚಾಗಿ ಅದರ ಪ್ರಭಾವದಿಂದುಂಟಾದ ಅನರ್ಥಗಳೇಬಲ. ತಮ್ಮ ಸುಖವೆ ಸುಖ, ಇನ್ನೊಬ್ಬರ ಯೋಚನೆಯೇ ಇಲ್ಲ. ಆ ವ್ಯವಹನೀಯರಾದರೂ ಇದನ್ನೆಲ್ಲಾ ಕ್ರಮಪಡಿಸಿದರೆ ಆಗ್ಗೆ ನಮ್ಮ ಗ್ರಾಮಗಳು ಲಕ್ಷ್ಮೀಸದನ

ಮದ್ಯಪಾನವು ಅವಶ್ಯಕವೆ ?—ಈ ವಿಷಯದ ಇಂಡಿಯನ್ ಸೋಷಿಯಲ್ ರಿಫಾರ್ಮರ್ ಪತ್ರಿಕೆಯ ಈ ರೀತಿ ಪ್ರಕಟಿಸಿರುತ್ತೆ. ಕಲ್ಕತ್ತಾ ಆಕ್ಸ್‌ಫರ್ಡ್ ಮುದ್ರಣಾಲಯದಲ್ಲಿ ಎಚ್ಫೆನಿ ಪತ್ರಿಕೆಯೊಂದನ್ನು ಯಾರೋ ಒಬ್ಬರು ನಮಗೆ ಕಳುಹಿಸಿರುತ್ತಾರೆ. ಆ ಪತ್ರಿಕೆಯಲ್ಲೊಂದು ಪ್ರಶ್ನೋತ್ತರಗಳಿರುವುವು. ನಮ್ಮ ದೇಶದ ಈ ಪತ್ರಿಕೆಯನ್ನು ಕಳುಸಿರುವನವರು ಈ ಪ್ರಶ್ನೆಯನ್ನು ಗುರ್ತಿಸಿರುವರು " ಯೂರೋಪಿಯನರು ಮದ್ಯಪಾನದ ಅಭ್ಯಾಸವನ್ನು ಏತಕ್ಕೆ ? ಮದ್ಯಪಾನವನ್ನು ಕ್ರೈಸ್ತಮತವು ಅಂಗೀಕರಿಸುವದೇ ? " ಇದರ ಉತ್ತರಗಳು ಈ ಪ್ರಕಾರವಾಗಿವೆ. " ಮದ್ಯಪಾನವು ಜೀವನಾಧಾರವಾಗಿದೆ. ಆದ್ದರಿಂದ ಕ್ರೈಸ್ತ ಮತವು ಅದನ್ನು ನಿಷೇಧಿಸುವುದಿಲ್ಲ. ಆದ್ದರಿಂದ ಬೆಹ್ವಾಚಾರ್ಯವನ್ನು ತೀರಿಸಿಕೊಳ್ಳುವಂತೆ ಬೋಧಿಸುವುದು. ಕ್ರೈಸ್ತಮತವು ಏನನ್ನು ನಿಷೇಧಿಸುವುದೋ ಏನನ್ನು ನಿಷೇಧಿಸುವುದಿಲ್ಲವೋ. ಅದನ್ನು ಹೇಳಲು ನಾವು ಯತ್ನಿಸುವುದಿಲ್ಲ ಆದರೆ ಮದ್ಯಪಾನವು ಜೀವನಾಧಾರವಾದರೆ ಯಾರಾದರೂ ಪೂರ್ತಿಯಾಗಿ ಪಾನವನ್ನು ಮಾಡುವುದನ್ನು ಮರದಿಂದ ಜೀವಿಸುವುದೇ ದುರ್ಭರ

ಜಾತುರಾಶಿ ಇಷ್ಟೇಅಲ್ಲದೆ ಲಕ್ಷ್ಮೀಪಲಕ್ಷ್ಮ ಮಧ್ಯವನ್ನು ಸ್ವಲ್ಪವೂ ಮುಟ್ಟದೆ ಬಹಳ ಕಾಲ ಸೆ ಸ್ಯಯೋಜನಕಾರಿಗಳಾಗಿದ್ದರು ; ಅಂಥಾ ಮಧ್ಯಪಾನವನ್ನು ಮಾಡುವುದು ಜೀವನಾಧಾರವೆಂದು ನಿರ್ಣಯಿಸಿದರೆ ಪರಮ ನಿಕೃಷ್ಟ ಕೆಲಸ ಮಾಡಿದಂತಾಗುವುದು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು ಕಳೆದ ೫ ನೆ ತಾರೀಖಿನ ದಿವಸ ಪ್ರಾರಂಭವಾಗಿ ೫ ದಿನಗಳು ನಡೆಯಿತು. ದಿವಾನರವರ ಅಧ್ಯಕ್ಷ ಪದವಿಯ ಭಾಷಣವು ಸಂಸ್ಥಾನದ ಆಯವ್ಯಯ ವಿಷಯಗಳನ್ನೊಳಗೊಂಡು, ಕೇವಲ ಧನಾಭಾವವನ್ನು ಮಾತ್ರ ಹೆಚ್ಚು ವ್ಯಕ್ತಪಡಿಸಿರುವುದರಿಂದ ಅಷ್ಟೇನೂ ಸ್ವಾರಸ್ಯವಾಗಿಯೂ ದೇಶೋನ್ನತಿ ಅಷ್ಟು ಪ್ರಯೋಜನದಾಯಕವಾಗಿಯೂ ಕಂಡುಬರಲಿಲ್ಲ. ಸರ್ಕಾರೀ ಅಡಳಿತದ ಖರ್ಚು ಜೋತಾಮಾಡಲು ಒಂದು ಉಪಸಭೆ ಸ್ಥಾಪಿಸಲು ಒಪ್ಪಲ್ಪಟ್ಟಿದ್ದೇ ಈ ಅಧಿವೇಶನದ ಪ್ರಮುಖಕಾರ್ಯ ಕಾರ್ಯವೆಂದು ಹೇಳಬಹುದು. ಈ ಸಾರಿ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಅನೇಕ ಹುಡುಗರು ತೇರ್ಗಡೆಯಾಗದಿರಲು ಕಾರಣವನ್ನು ತಿಳಿಯಲು ಮೆಂಬರುಗಳು ಜತ್ತಿಜತ್ತಿ ಮಾತಾಡಿದ್ದು ಒಂದು ಶ್ಲಾಘ್ಯವಾದ ವಿಷಯ. ಮದ್ಯಪಾನನಿರೋಧ ವಿಷಯದಲ್ಲಿ ಚುಂಬಾ ಚರ್ಚೆನಡೆಯಿತು.

ವೃತ್ತಾಂತ ಸಂಗ್ರಹ

—ಹಿಂದೂದೇಶದ ಜನಸಂಖ್ಯೆ ೩೦ ಕೋಟಿ. ಅದರಲ್ಲಿ ರೈಲಿನಲ್ಲಿ ಪ್ರಯಾಣ ಮಾಡಿರುವ ಸಂಖ್ಯೆಯು ತರಗತಿಪ್ರಕಾರವಾಗಿ ಹೀಗಿರುವುದು:—

೧ನೇ ತರಗತಿ	೯೧೬೬೦೦
೨ನೇ ತರಗತಿ	೫೧೩೨೮೦೦
ಇಂಟರ್	೮೧೨೬೯೦೦
೩ನೇ ತರಗತಿ	೫೦೨೮೫೫೧೧೦೦
ಸೀಜನ್ ಟಿಕೆಟ್ ಕೊಂಡಿರುವರು	೫೫೬೬೬೯೦೦
ಒಟ್ಟು	೫೬೨೧೬೯೫೪೦೦

—ಕಳೆದ ಜುನಾವಣೆಗಳ ಫಲಿತವಾಗಿ ಅಮೆರಿಕಾ ದೇಶದಲ್ಲಿ ಇಬ್ಬರು ಸ್ತ್ರೀಯರ್ನ ಗೌರ್ನರನ್ನಾಗಿ ಜುನಾಯಿಸಿರುವರು. ಶಾಸನ ಸಭೆಗಳಲ್ಲಿ ಲಲ ಸ್ತ್ರೀಯರಿರುವರು. ಕಾಂಗ್ರೆಸ್ಸಿನಲ್ಲಿ ಒಬ್ಬಳು ಪ್ರತಿನಿಧಿಯು ನ್ಯೂಯಾರ್ಕ್ ಸೆಕ್ರೆಟರಿ ಆಫ್ ಸ್ಟೇಟರನ್ನಾಗಿ ಜುನಾಯಿಸಲ್ಪಟ್ಟಳು. ಹೀಗೆ ಸ್ತ್ರೀಯರು ಮುಂದರಿಸಿರುವುದು ತುಂಬಾ ಆಶ್ಚರ್ಯವಾದುದು. ೧೦ ವರ್ಷಗಳಲ್ಲಿ ಇಷ್ಟು ಅಭಿವೃದ್ಧಿಯನ್ನು ಹೊಂದಿರುವರು

—ನ್ಯೂಯಾರ್ಕ್ ಯೂನಿವರ್ಸಿಟಿ ಪ್ರೊಫೆಸರುಗಳು ತಮ್ಮ ೪೫೦ ವಿದ್ಯಾರ್ಥಿಗಳೊಂದಿಗೆ ೧೮೦೦೦ ಟನ್ ಭಾರದ್ದೊಂದು ಹಡಗನ್ನೇರಿ ಭೂಪ್ರದಕ್ಷಿಣೆ ಮಾಡುವರು. ಪರೀಕ್ಷೆಗಾಗಿ ಹಡಗಿನಲ್ಲಿಯೇ ಪ್ರತಿದಿನವೂ ಶಾಲಾಪಾಠಗಳೂ ನಡೆಯುವುವು ಇವರು ೩೫ ದೇಶಗಳನ್ನು ಸಂಚರಿಸುವರು ಇದೊಂದು ತೇಲುವ ಯೂನಿವರ್ಸಿಟಿ.

—ಶ್ರೀಮತಿ ನೂರ್‌ಜಹಾ ಎಂಬಾಕೆಯನ್ನು ಸಂಯುಕ್ತ ಪ್ರಾಂತ್ಯದ ಸಂಕಾದದವರು ವಿಲಾಯಿತಿಗೆ ಪ್ರತಿನಿಧಿಯಾಗಿ ಕಳುಹಿಸಿಕೊಡಲು ಆಯ್ಕೆ ಮಾಡಿರುವರು.

ಈಜಿಪ್ತಿಗೆ ಅಮೆರಿಕದ ಕೋಟ್ಯಾಧೀಶ್ವರನಾದ ರೋಸ್ ಬಾಕ್ ಎಂಬಾತನು ಯೂರೋಪಿನ ರಾಜ್ಯಗಳಲ್ಲಿ ಸಂಚಾರ ಮಾಡುತ್ತಿದ್ದು, ಸುಮಾರು ೪ ಲಕ್ಷ ರೂ ಬೆಲೆಬಾಳುವ ಪುಸ್ತಕಗಳನ್ನು ಕೊಂಡುಕೊಂಡ ನೆಂದೂ, ಈಚೆಗೆ ೭ ವರ್ಷಗಳಿಂದ ಅವನು ಕೊಂಡು ಕೊಂಡಿರುವ ಪುಸ್ತಕಗಳು ಸುಮಾರು ೨೦ ಲಕ್ಷ ರೂ ವಾಯಿಗಳಿಗೆ ಮೌಲ್ಯವ್ಯ ಆಗ ಬಹುದೆಂದೂ ತಿಳಿಯ ಬಂದಿದೆ.

ತುರ್ಕೀ ರಾಜ್ಯದಲ್ಲಿ ಸ್ತ್ರೀ ಸ್ವಾತಂತ್ರ್ಯ ಪ್ರಾರಂಭವಾಗಿದೆ. ಸೈನ್ಯದ ಬಾಬಿನಲ್ಲಿ ಇಬ್ಬರು ಸ್ತ್ರೀಯರು ಹುದ್ದೇದಾರರಾಗಿರುವರಲ್ಲದೆ ಸಾಧಾರಣ ಅಧಿಕಾರಗಳನ್ನು ಅನೇಕ ಸ್ತ್ರೀಯರು ಹೊಂದಿರುತ್ತಾರೆ.

ಗ್ವಾಲಿಯರ ಮಹಾರಾಜರವರು ಕಳೆದ ವಾರ ಪ್ಯಾರಿಸ್ ಪಟ್ಟಣದಲ್ಲಿ ದೈವಾಧೀನರಾದರೆಂಬುದು ಕೇಳಲು ವಿಷಾದಪ್ರದವಾಗುತ್ತೆ. ಇಂದೂರು ಸಂಸ್ಥಾನದ ಉಪಯೋಗಾರ್ಥ ಇವರು ಲಾರ್ಡ್ ರೀಡಿಂಗಿನ ವರೊಡನೆ ಮಾತನಾಡುವುದಕ್ಕಾಗಿ ಲಂಡನ್ನಿಗೆ ಪಯಾಣ ಮಾಡುತ್ತಿದ್ದರು.

ಕಾರ್ಲ್ ಪುಷ್ಕಾಕ್ಸ್ ಎಂಬಾತನು ತನ್ನ ಹೆಂಡತಿಯನ್ನು ಖೂನಿ ಮಾಡಿದನೆಂಬ ಅಪಾದನೆ ಮೇಲೆ ಜೀವಾವಧಿ ಸಜೆ ಅನುಭವಿಸುತ್ತಿರುವನು. ಸಜೆ ಅನುಭವಿಸಲು ಮೊದಲೇ ಒಂದು ಲಾಟರಿಗೆ ಪಣಹಾಕಿ ಟಿಕೀಟು ಪಡೆದಿದ್ದನು. ಅವನಿಗೆ ೪೦,೦೦೦ ರೂಪಾಯಿನ ಮೊದಲನೇ ಬಹುಮಾನ ದೊರೆತಿದೆ. ಇವನು ಖೈದಿಯಾಗಿರುವುದರಿಂದ ಈ ಹಣ ಈತನಿಗೆ ಸಿಕ್ಕುವ ಹಾಗಿಲ್ಲ. ಅದನ್ನು ಇವನ ೫ ವರ್ಷದ ಮಗನ ಹೆಸರಿನಲ್ಲಿ ಸರ್ಕಾರದಲ್ಲಿ ಇರಿಸಿರಬೇಕೆಂದು ತೀರ್ಮಾನಿಸಿರುವರು.

—ತಮಿಳು ನಾಡಿನ ವಿ. ವಿ. ಎಸ್ ಐಯರ್‌ರವರ ತಮ್ಮ ೧೪ ವಯಸ್ಸಿನ ಮಗಳೊಂದಿಗೆ ಪಾಪನಾಶಂ ಬೆಟ್ಟಗಳ ಸಮೀಪದಲ್ಲಿರುವ ಕಲ್ಯಾಣ ತೀರ್ಥಕ್ಕೆ ಸ್ನಾನಕ್ಕೆ ಹೋಗಿದ್ದರು. ದುರದೃಷ್ಟದಿಂದ ಮಗಳು ಆಯ ತಪ್ಪಿ ನೀರಿನಲ್ಲಿ ಮುಳುಗಿದಳು. ಐಯರ್‌ರವರು ತಮ್ಮ ಪ್ರಿಯ ಪುತ್ರಿಯನ್ನು ರಕ್ಷಿಸಲು ತಾವೂ ನೀರಿಗಿಳಿದು ಮುಳುಗಿ ಬಿಟ್ಟರು. ಮಗಳ ಶವವು ದೊರೆತಿದೆ. ಐಯರ್‌ರವರ ಶವವು ಇನ್ನೂ ಸಿಕ್ಕಿಲ್ಲ.

—ಬಿ. ಎ. ಪ್ಯಾಸಾಗಿ ಅಕಾಲಮರಣ ಹೊಂದಿದ ರಾ || ವಿಷ್ಣುಪಂತಜಗತ್‌ರವರು ತಮ್ಮ ಮಗಳ ಸ್ಮಾರಕವಾಗಿ ನಾಗಪುರದ ಯೂನಿವರ್ಸಿಟಿ ಲೈಬ್ರರಿಗೆ ೫೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪುಸ್ತಕ ಭಾಂಡಾರಗಳಿಗೆ ಹಣವನ್ನು ಕೊಡುವುದು ದೇವಾಲಯಗಳಿಗೆ ಸ್ವಾಸ್ಥಿ ಬಿಡುವಷ್ಟೆ ಪುಣ್ಯಕರವಲ್ಲವೆ?

—ತಿರುವಾಂಕೂರು ಸಂಸ್ಥಾನದ ದಿವಾನರು ಎಲ್ಲಾ ರಾಜಮಾರ್ಗಗಳಲ್ಲಿ ಯಾವತ್ತು ಜಾತಿಗಳ ಸಂಚಾರಕ್ಕೆ ಯಾವ ತಡೆಯೂ ಇರಬಾರದೆಂಬುದೇ ತಮ್ಮ ಅಭಿಮತವೆಂದು ತಿಳಿಸಿದ್ದಾರೆ. ಹೀಗಾದಲ್ಲಿ ವೈಕೋಮಿನ ಸತ್ಯಾಗ್ರಹಿಗಳಿಗೆ ವಿಜಯವೇ ಸಿದ್ಧಿ.

—ರಾಣೆ ಬನ್ನೂರಿನಲ್ಲಿ ಈಚೆಗೆ ನಡೆದ ಒಂದು ಸಭೆಯಲ್ಲಿ ಇನ್ನು ಮುಂದೆ ದೇವೀಜಾತ್ರೆಗಳಲ್ಲಿ ಪ್ರಾಣಿಗಳ ಬಲಿಕೂಡಕೂಡದೆಂದೂ ಫಲಪುಷ್ಪಗಳಿಂದಲೇ ದೇವರನ್ನು ಪೂಜಿಸಬೇಕೆಂದೂ ನಿರ್ಣಯಿಸಿರುವುದು ಸ್ತೋತ್ರಾರ್ಹವಾಗಿದೆ.

—ಮೆಕ್ಕಾಕ್ಕೆ ಹೋಗುತ್ತಿರುವ ಕರ್ಯ ಮತ್ತು ಅನುಕೂಲ್ಯತೆಯ ಷ್ ಸರ್ಕಾರದವರು ಹಡಜಾಜಿನ ಮತ್ತು ನೇಡ್ಜಿನ ಸುಲ್ತಾನನಿಗೂ ಎಚ್ಚೆತ್ತಿರುವನು.

—ಮೀರಟ್ಟಿನ ಪ್ರಸಿದ್ಧ ಅಡ್ವೋಕೇಟರಾದ ಬಾಬು ಬೈಜ್‌ನಾಥ್ ಎಂಬುವರು ತಮ್ಮ ಮಗಳನ್ನು ಅಲ್ಲಿಯ ಡೆಪ್ಯುಟಿ ಕಲೆಕ್ಟರ್ ಶ್ರೀ ಗೋಪಾಲರವರ ಮಗನಿಗೆ ಎರಡು ವರ್ಷಗಳ ಹಿಂದೆ ವಿವಾಹಮಾಡಿದರು. ಇಬ್ಬರಿಗೂ ವರದಕ್ಷಿಣೆ ಮತ್ತು ಬಳುವಳಿಯ ವಿಷಯದಲ್ಲಿ ಚರ್ಚೆಹುಟ್ಟಿ ಕಡೆಗೆ ಹುಡುಗಿಯ ನಡತೆಯು ಸರಿಯಲ್ಲಿಲ್ಲವೆಂಬ ಸಬುಬಿನ ಮೇಲೆ ಹುಡುಗಿಯನ್ನು ಗಂಡ ಮತ್ತು ಮಾವನು ಮನೆಗೆ ಸೇರಿಸದೆ ತಂದೆ ಮನೆಗೆ ಅಟ್ಟಿಬಿಟ್ಟರು. ನಂತರ ಹುಡುಗಿ ಮತ್ತು ಅವಳ ತಂದೆ ಮೇಲೆ ಸುಳ್ಳು ಕೃತ್ರಿಮ ಮತ್ತು ಅವಮಾನಕರವಾದ ವಿಷಯಗಳನ್ನೊಳಗೊಂಡ ಪ್ರಕಟಣೆ ಪತ್ರಿಕೆಗಳನ್ನು ಹರಡಿ ಬೈಜ್‌ನಾಥ್‌ರವರ ಸುಪ್ರಸಿದ್ಧತೆಗೆ ಕುಂದಕವನ್ನುಂಟುಮಾಡಲು ಪ್ರಯತ್ನಪಟ್ಟರು. ಈ ವಿಷಯದಲ್ಲಿ ಮೊಖದ್ದಮಾಹುಟ್ಟಿ ತಂದೆಮಗನಿಗೆ ೧ ವರ್ಷ ಸಜೆ ಮತ್ತು ೧೦೦೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿದೆ. ಅಪರಾಧಿಗಳು ಅಪೀಲ್ ಮಾಡಿ ಜಾಮೀನಿನ ಮೇಲೆ ಬಿಡಲ್ಪಟ್ಟಿರುತ್ತಾರೆ.

—ಒಂದು ವಾರಕ್ಕೆ ಮೇಲ್ಪಟ್ಟು ರಾಜಧಾನಿಯಲ್ಲಿ ತಮ್ಮ ಅದ್ಭುತವಾದ ಆಟಗಳನ್ನು ಪ್ರದರ್ಶಿಸುತ್ತಿರುವ ದೇವಲ್ ಸರ್ಕಸ್ಸಿನವರು ಇನ್ನೆರಡುಮೂರು ದಿನಗಳ ನಂತರ ಬೆರಗಳೂರಿಗೆ ಪ್ರಯಾಣಮಾಡಿ ಅಲ್ಲಿ ಕೆಲವು ದಿವಸಗಳು ತಮ್ಮ ಆಟವನ್ನು ತೋರಿಸುವವರಾಗಿರುತ್ತಾರೆ. ಮೈಸೂರು ಪ್ರಜೆಗಳಿಗೆ ಇವರ ಆಶ್ಚರ್ಯಕರವಾದ ಸಾಹಸಕೃತ್ಯಗಳು ತುಂಬಾ ಸಂತೋಷವನ್ನುಂಟುಮಾಡಿರುತ್ತದೆ.

—ಚೀಫ್ ಕೋರ್ಟಿನ ೨ ನೇ ಜಡ್ಜಿಯವರಾದ ಮಿ|| ಸುಬ್ಬಣ್ಣನವರು ಕೆಲವು ದಿನಗಳಲ್ಲಿಯೆ ರಿಟೈರಾಗುವರೆಂದೂ ಅವರ ಸ್ಥಾನಕ್ಕೆ ಮಿ|| ದೊರೆಸ್ವಾಮಿ ಅಯ್ಯರ್‌ರವರು ನಿಯಮಿಸಲ್ಪಡುವರೆಂದೂ ಈಗಿನ ವದಂತಿ.

—ಕಳೆದ ತಿಂಗಳಲ್ಲಿ ಪೂನಾ ಪಟ್ಟಣದ ಗಣೇಶಪೇಟೆಯಲ್ಲಿರುವ ದೇವಾಲಯದ ಲಕ್ಷ್ಮೀ ಮತ್ತು ಗಣೇಶ ವಿಗ್ರಹಗಳನ್ನು ಯಾರೋ ಒಡೆದುಹಾಕಿರುವರೆಂದೂ, ಪೋಲೀಸಿನವರು ಪತ್ತೇ ತರುದೂದು ಮಾಡುತ್ತಿರುವರೆಂದೂ ವರ್ತಮಾನ.

—ಒಂದು ವಾರದ ಹಿಂದೆ ಮಧ್ಯಪ್ರಾಂತ್ಯದ ಭಾಂದ್ರಾ ವಿಗೆ ಕಾಡಿನಿಂದ ಒಂದು ಹುಚ್ಚು ನರಿಯು ಬಂದು ೧೫೦ ಜನರನ್ನು ಕಚ್ಚಿತೆಂದೂ ೬೦ ಜನರು ಆಸ್ಪತ್ರೆಗೆ ಗುಣಹೊಂದಲು ಕಳುಹಿಸಲ್ಪಟ್ಟಿರುವರೆಂದೂ, ಹುಚ್ಚು ನರಿಯು ಇನ್ನೂ ಹಿಡಿಯಲ್ಪಟ್ಟಿಲ್ಲವೆಂದೂ ತಿಳಿಸುಬಂದಿದೆ.

—ಇಂದೂರಿನ ಮಹಾರಾಜರು ಇಂಗ್ಲೆಂಡಿಗೆ ಹೊ ೫೫ ವರ್ಷಕಾಲ ಅಲ್ಲಿರುವರೆಂದೂ, ೧೬ ವರ್ಷ ಅವರ ಮಗನಿಗೆ ೨೧ ವರ್ಷ ವಯಸ್ಸು ತುಂಬಿದೆನೆ ರಾಜ್ಯಾಭಿಷೇಕವಾಗುವುದೆಂದೂ ಮಸ್ಲಿಂ ಔಟ್‌ಲುಕ್ ಪತ್ರಿಕೆಯು ಪ್ರಕಟಿಸಿರುತ್ತದೆ.

—ಈ ಸಾರಿ ಕಲ್ಕತ್ತಾ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಶೇಕಡ ೭೫ ರಂತೆ ತೇರ್ಗಡೆ

—ಮೈಸೂರಾಯಿ ರೀಡಿಂಗರವರು ಮುಂದಿನ ತಿಂಗಳಲ್ಲಿ ಲಂಡನ್ನಿನಿಂದ ಹೊರಟು ಇಂಡಿಯಾಕ್ಕೆ ಬರುತ್ತಾರೆ

ಏಷಲ್ ಆಟಿಗಳು ಮಾತ್ರ

ಈ ರಾತ್ರಿ ೧೦ ಘಂಟೆಗೆ ಈ ರಾತ್ರಿ

ಪ್ರೊ. ದೇವಲ್ ಸರ್ಕಸ್

ಜೀವಣರಾಯನ ಕಟ್ಟೆ ಬಳಿ, ಮೈಸೂರು

ಹುಡುಗರಿಗೆ ಅರ್ಧಛಾರ್ಜು

ಅತ್ಯದ್ಭುತ, ಸಾಹಸಿಕ, ವಿನೋದಾಂಜಕ ಆಟಗಳು

ವಿ. ಎಸ್ ದೇವಲ್ 5-6

ಕೆ.ಎಸ್. ದೇವಲ್ ಆರ್. ವಿ ಪಟ್ಟವರ್ಧನ್

ಪ್ರೊಪ್ರೈಟರ್ಸ್ ಮ್ಯಾನೇಜರ್

The Champion Metropolitan College of Commerce, Economics, Banking, etc.

YELWAL ROAD, MYSORE.

1925--26 Prospectus can be had free at the College or by post on receipt of ½ anna stamp to cover postage (5-6)

TO LET

to

Permanent Advertisers

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಗಂಧದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ ಎಲ್ಲಾ ತರಹ ಮುರಬ್ಬಾಗಳು, ಎಲ್ಲಾ ತರಹದ ಷರಬತ್ತುಗಳು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಪಡೆಯಾಗಿಯೂ, ಪದಾರ್ಥಗಳು ಸಂಬಿಕೆಯಾಗಿಯೂ ಇರುತ್ತವೆ. ಅಪೇಕ್ಷಿಸುವವರು ತರಿಸಿಕೊಳ್ಳಲಿಕಾಗಿ ಪ್ರಾರ್ಥನೆ. [22-6]

ಟಿ. ಎಲ್ ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿಗಳು, ಮೈಸೂರು

To Popularise your Business

in the Karnataka Provinces

YOU MUST ADVERTISE IN

the "SATYAVADI"

BECAUSE

It is the cheapest and most up-to-date Karnatic Weekly

It is read largely and widely

Itis circulated among all grades of persons

It offers a profitable medium for advertising

Advertisement in this Paper is a good investment

Your Advertisement is Solicited

RATES of ADVERTISEMENTS

	1 clm	½ clm	¼ clm	1 inch
1 year	Rs 100	55	30	12
6 months	55	30	17	7
3 months	30	17	9	4
1 month	11	6	4	1-8-0
1 insertion	3	2	1-4-0	0-8-0

Advertisement charges are strictly payable in advance. One column measures about 13"×2½". 3columns to a page. Voucher copy supplied free.

All communications & remittances to be addressed to

The Manager,
SATYAVADI Office,
Mysore, S. India.

ಇಂಡಿಯಾ. ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-6

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್‌ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ್

927 ಚಾಮರಾಜ ಪುರಂ, ಮೈಸೂರು.

ಕಾದಂಬರೀ ಸಂಗ್ರಹ

ಮನೋಹರವಾದ ಕರ್ಣಾಟಕ ಮಾಸಪತ್ರಿಕೆ

ಚಾಮರಾಜ ನಗರ

THE MYSORE PRESS

RAMAVILAS ROAD

MYSORE

We undertake to print

JOBS — BOOKS & PERIODICALS

Neat Workmanship

Moderate Charges

Prompt Execution

Colour & artistic work a speciality

Trial order solicited

B.S. MURTHY, B. A
Proprietor.

ಮೈಸೂರ್ ಪ್ರೆಸ್

ರಮಾವಿಲಾಸ ಅಗ್ರಹಾರ

ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

☞ ದಯವಿಟ್ಟು ಗಮನಿಸಿ:—

ನಮ್ಮ ಮುದ್ರಣವು ಬಹು ಅಂದ!

ನಮ್ಮ ಅಕ್ಷರವು ಬಲು ಚಂದ!!

ನಮ್ಮ ಕೆಲಸ ನೋಡುವವರಿಗೆ

ನೀತ್ರಾನಂದ!!!

ಬಿ. ಎಸ್. ಮೂರ್ತಿ, ಬಿ. ಎ

ಪ್ರೊಪ್ರೈಟರ್.

Printed and Published by B.S.Murthy, B.A at the Mysore Press, Mysore, for the Ed and Proprietor.